ಬಡವರನ್ನು ಮೇಲಕ್ಕೆ ಎತ್ತುವುದಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಾನು ಹೇಳುತ್ತೇನೆ, ೧೦೦ ಜನ ಅದರಲ್ಲಿ ಸಾಲ ತೆಗೆದುಕೊಂಡಿದ್ದರೆ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ೫೦ ಜನರು ಇರುತ್ತಾರೆ. ಅದನ್ನು ನಾವು ಟೀಕೆ ಮಾಡುವುದು ಸರಿಯಲ್ಲ. ಆದರೆ ಕಾರ್ಯಕ್ರಮಗಳ ಬಗ್ಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು. ಆ ವಿಚಾರವಲ್ಲ, ಅವರು ಬಡವರ ಬಗ್ಗೆ ಎಷ್ಟು ಗಮನ ಇಟ್ಟು ಕೆಲಸ ಮಾಡುತ್ತಾರೆ ಅನ್ನುವುದನ್ನು ನಾವು ನೋಡಬೇಕು. ಅವರು ಇದಕ್ಕಾಗಿ ೭೦೦ ಕೋಟಿ ರೂಪಾಯಿ ಏನು ತೆಗೆದು ಇಟ್ಟಿದ್ದಾರೆ ಅದನ್ನು ಸಂಪೂರ್ಣವಾಗಿ ವಿನಿಯೋಗ ಮಾಡಿದ್ದಾರೆಯೇ ಎಂದು ಕೇಳುತ್ತಾರೆ. ಅವರು ಒಂದು ಕಡೆಯಲ್ಲಿ ಹೇಳಿದ ಭಾಷಣ ಏನೆಂದರೆ, ಇದಕ್ಕೆ ಮೊದಲು ೩೦೦ ಕೋಟಿ ರೂಪಾಯಿ ನಿಗದಿಯಾಗಿತ್ತು, ಅದು ನನ್ನ ಸೈನ್‌ಗೆ ಬಂದಾಗ ೨೦೦ ಕೋಟಿ ರೂಪಾಯಿ ಆಗಿತ್ತು. ಇನ್ನು ೧೦೦ ಕೋಟಿ ರೂಪಾಯಿ ಹಾಗೇ ಇತ್ತು ಎಂದು ಹೇಳಿದರು. ಈ ಬಡವರ ಬಗ್ಗೆ ಶ್ರೀ ಜನಾರ್ಧನ ಪೂಜಾರಿಯವರು ಬಹಳ ಅನುಕಂಪ ಇಟ್ಟು ಈ ಸಾಲ ಮೇಳವನ್ನು ಮಾಡಿದ್ದಾರೆ. ಈ ಸಾಲ ಮೇಳ ಇರುವುದು ಸರಿಯಾಗಿದೆ, ನಿಜವಾಗಿಯೂ ಇದು ಬಡವರಿಗೆ ಒಳ್ಳೆಯದಾಗಿದೆ ಎಂದು ಹೇಳುತ್ತೇನೆ, ಕೊನೆಯದಾಗಿ, ಈ ರಾಜ್ಯಪಾಲರ ಭಾಷಣ ಬರೇ ಸಪ್ಪೆಯಾಗಿದೆ ಎಂದು ಹೇಳಿ, ಇದರ ಬಗ್ಗೆ ನಾನು ಬರೆದಂಥಾ ನಾಲ್ಕು ಚರಣಗೀತೆಯನ್ನು ಹಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಈ ರೀತಿ ಇದೆ :

"ರಾಜ್ಯಪಾಲರ ಭಾಷಣ ಸಪ್ಪೆ ಮಾಮೂಲಿ,
ಉಳ್ಳವರ ಕಡೆಗೆ ಬೀಸಿದೆ ಇದರ ಗಾಳಿ,
ರೈತರಿಗೆ, ಬಡವರಿಗೆ ಏನೂ ಇಲ್ಲ , ಖಾಲಿ,
ಕೋಮು ಸೌಹಾರ್ದಕ್ಕೆ ಸಲಹೆ ಎಲ್ಲಿದೆ ಹೇಳಿ."

ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಸಂಸದೀಯ ಪದಗಳ ಎಕ್ಸ್‌ಪಂಜ್

ಅಧ್ಯಕ್ಷರು.—ಶ್ರೀ ಜಿ. ನಾರಾಯಣ ಕುಮಾರ್‌ರವರು ಭಾಷಣ ಮಾಡಿದಾಗ ಶ್ರೀ ಉಮರಬ್ಬ ನವರ ಬಗ್ಗೆ ಹೇಳಿದ ಅನ್‌ಪಾರ್ಲಿಮೆಂಟರಿ ಪದಗಳನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಎರಡನೆಯದಾಗಿ ನಾಳೆ ದಿವಸ ಪ್ರಶ್ನೋತ್ತರಗಳು ಇಲ್ಲ, ಗಮನ ಸೆಳೆಯುವ ಸೂಚನೆ ಇಲ್ಲ, ಖಾಸಿಳಿರ ನಿಯಮ ಇಲ್ಲ. ನಾಳೆ ದಿವಸ ಇನ್ನೂ ಮೂರು ಜನರು ಅಂದರೆ ಶ್ರೀಮಾನ್ ವೀರಪ್ಪ ಮೊಯ್ಲಿ, ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀಮಾನ್ ಕೆ.ಹೆಚ್. ಶ್ರೀನಿವಾಸ್‌ರವರು ಮಾತನಾಡಬೇಕಾಗಿದೆ, ಅನಂತರ ೧೧ ಗಂಟೆಗೆ ಉತ್ತರವನ್ನು ಕೊಡುತ್ತಾರೆ.

ಈಗ ಸಭೆಯು ೭–೧೫ ಗಂಟೆಗೆ ಮೇಲಕ್ಕೆದ್ದು ಮತ್ತೆ ನಾಳೆ ಬೆಳಿಗ್ಗೆ ೯ ಗಂಟೆಗೆ ಸೇರುತ್ತದೆ.

(ಸದನವು ೭–೧೫ಕ್ಕೆ ಮುಕ್ತಾಯವಾಗಿ ದಿನಾಂಕ ೧೩–೨–೧೯೮೭ ರಂದು ಶುಕ್ರವಾರ ಬೆಳಗ್ಗೆ ೯ ಗಂಟೆಗೆ ಸೇರಲು ನಿಶ್ಚಯಿಸಿತು)

ಕಾ. ಸೂ. ೬೩